# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1084
2. ಮಾನ್ಯ ಸದಸ್ಯರ ಹೆಸರು : ಶ್ರೀ ಮಧು.ಜಿ ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 16.12.2025
4. ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯದ ಮೈಷುಗರ್ ಕಾರ್ಖಾನೆಯಲ್ಲಿ ಮೊಲಾಸಿಸ್ ಸಂಗ್ರಹಿಸಲು ಸ್ಥಾಪಿಸಿರುವ ಒಟ್ಟು ಟ್ಯಾಂಕ್ ಗಳ ಸಂಖ್ಯೆ ಹಾಗೂ ಪ್ರತಿ ಟ್ಯಾಂಕನ ಸಂಗ್ರಹ ಸಾಮರ್ಥ್ಯ ಎಷ್ಟು; (ವಿವರ ನೀಡುವುದು) | ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇಲ್ಲಿ ಒಟ್ಟು 04 ಮೊಲಾಸಿಸ್ ಸಂಗ್ರಹಣಾ ಟ್ಯಾಂಕುಗಳು ಇರುತ್ತವೆ. ಸದರಿ ಟ್ಯಾಂಕುಗಳ ಸಂಗ್ರಹಣಾ ಸಾಮರ್ಥ್ಯ ಈ ಕೆಳಕಂಡಂತಿವೆ.<br>1. ಟ್ಯಾಂಕ್ ನಂ.6 - 1500 ಮೆ.ಟನ್<br>2. ಟ್ಯಾಂಕ್ ನಂ.7 - 800 ಮೆ.ಟನ್<br>3. ಟ್ಯಾಂಕ್ ನಂ.8 - 800 ಮೆ.ಟನ್<br>4. ಟ್ಯಾಂಕ್ ನಂ.9 - 4000 ಮೆ.ಟನ್ |
| (ಆ) | ಇತ್ತೀಚೆಗೆ ಮೈಷುಗರ್ ಕಾರ್ಖಾನೆಯಲ್ಲಿ ಟ್ಯಾಂಕ್ ನಿಂದ ಭಾರೀ ಪ್ರಮಾಣದಲ್ಲಿ ಮೊಲಾಸಿಸ್ ಸೋರಿಕೆಯಾಗಿ ಮಣ್ಣು ಪಾಲಾಗಿದ್ದು, ನಿಜವೇ; ಹಾಗಿದ್ದಲ್ಲಿ, ಎಷ್ಟು ಟನ್ ಮೊಲಾಸಿಸ್ ಸೋರಿಕೆಯಾಯಿತು: ಮಾರುಕಟ್ಟೆ ದರ ಆಧರಿಸಿದಂತೆ ಆದ ಒಟ್ಟು ಆರ್ಥಿಕ ನಷ್ಟ ಎಷ್ಟು; | ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇಲ್ಲಿ ದಿನಾಂಕ:20.09.2025ರಂದು 4000 ಮೆ.ಟನ್ ಸಾಮರ್ಥ್ಯದ ಟ್ಯಾಂಕ್ ಸಂಖ್ಯೆ: 09 ರಲ್ಲಿ ಬಿರುಕಿನಿಂದಾಗಿ ಮೊಲಾಸಿಸ್ ಸೋರಿಕೆಯಾಗಿರುತ್ತದೆ.<br><br>ಮೊಲಾಸಿಸ್ ಸೋರಿಕೆಯಾಗಿರುವ ಪ್ರಕರಣದ ಕುರಿತು ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ತಾಂತ್ರಿಕ ಸಲಹೆಗಾರರೊಂದಿಗೆ ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇಲ್ಲಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆಯನ್ನು ನಡೆಸಿ ವಾಸ್ತವಾಂಶವುಳ್ಳ ವರದಿಯನ್ನು ಸಲ್ಲಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್ ಕೆ/ಇಎಪಿ/12/2024-25, ದಿನಾಂಕ:09.10.2025ರ ಪತ್ರದಲ್ಲಿ ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ ಇವರಿಗೆ ತಿಳಿಸಲಾಗಿತ್ತು. |
| (ಇ) | ಟ್ಯಾಂಕ್ ನಿಂದ ಭಾರೀ ಪ್ರಮಾಣದಲ್ಲಿ ಮೊಲಾಸಸ್ ಸೋರಿಕೆಯಾಗಿದ್ದಕ್ಕೆ ಸಂಬಂಧಿಸಿದಂತೆ ತನಿಖೆ / ಆಂತರಿಕ ತನಿಖೆ ನಡೆಸಲಾಗಿದೆಯೇ; ತನಿಖಾ ವರದಿಯಲ್ಲಿ ಗುರುತಿಸಿದಂತೆ ಕಾರಣಗಳು ಹಾಗೂ ಪ್ರಸ್ತಾಪಿಸಲಾದ ಅಂಶಗಳೇನು: (ವಿವರವಾದ ಮಾಹಿತಿ ಹಾಗೂ ತನಿಖಾ ವರದಿ ನೀಡುವುದು) | ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ ಇವರು ದಿನಾಂಕ:24.10.2025ರಂದು ಪರಿಶೀಲನಾ ವರದಿಯನ್ನು ಸಲ್ಲಿಸಿದ್ದು ಸದರಿ ವರದಿಯಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತೆ ಇರುತ್ತವೆ.<br><br>1. ಪ್ರಸ್ತುತ ಬಿರುಕುಬಿಟ್ಟು ಸೋರುವಿಕೆಯಾದ ಮೊಲಾಸಿಸ್ ಟ್ಯಾಂಕ್ ಪರಿಶೀಲಿಸಿದಾಗ ಪ್ರಸ್ತುತ ಹಂಗಾಮು 2025-26ನೇ ಸಾಲಿನ 4 ಟ್ಯಾಂಕಿಗೆ ಮೌಲ್ಯಮಾಪನ ಇಲಾಖೆಯಿಂದ ಸತ್ಯಾಪನೆ ಪತ್ರವನ್ನು ಪಡೆಯಲಾಗಿದೆ.<br>2. ದಿನಾಂಕ:20.09.2025ರಂದು ಬೆಳಗಿನ ಜಾವ 6.00 ಗಂಟೆಗೆ 4,000 ಮೆ.ಟನ್ ಸಾಮರ್ಥ್ಯದ ಟ್ಯಾಂಕ್ ನಂ.9 ರ ಬಿರುಕಿನಿಂದ ಮೊಲ್ಯಾಸಿಸ್ ಸೋರುವಿಕೆ ಕಂಡು ಬಂದಿರುತ್ತದೆ ಎಂದು, ಸದರಿ ಟ್ಯಾಂಕುಗಳಲ್ಲಿ ಅಬಕಾರಿ ಇಲಾಖೆಯ ಪಂಚನಾಮೆಯ ಪ್ರಕಾರ ಮೊಲ್ಯಾಸಿಸ್ ಶೇಖರಣೆ ನೋಂದಾಯಿಸಿದ ಉತ್ಪಾದನಾ ವಿಭಾಗದ ಆರ್.ಜಿ-1 ರಿಜಿಸ್ಟರ್ ಪರಿಶೀಲಿಸಿದಾಗ, ದಿನಾಂಕ:20.09.2025 ಒಟ್ಟು 58,428.05 ಮೊಲ್ಯಾಸಿಸ್ ಸಂಗ್ರಹಣೆ ಕಂಡು ಬಂದಿರುತ್ತದೆ ಎಂದು, ಸದರಿ ಬಿರುಕು ಬಿಟ್ಟ ಟ್ಯಾಂಕ್ ನಂ.9ರಲ್ಲಿ 2528.05 ಮೆ.ಟನ್ ರಷ್ಟು ಮೊಲ್ಯಾಸಿಸ್ ಸಂಗ್ರಹಣೆ ಅಂದಾಜಿಸಲಾಗಿದೆ. |

| | | |
|---|---|---|
| | | 3. ಮೊಲಾಸಿಸ್ ಸೋರುವಿಕೆಯಿಂದ 15 ರಿಂದ 20 ಮೆ.ಟನ್ ರಷ್ಟು ಕಾಕಂಬಿ ನಷ್ಟವಾಗಿರುವುದೆಂದು ಅಂದಾಜಿಸಲಾಗಿದೆ ಎಂದು ಮಾರಾಟ ಮಾಡಿದ ಕಾಕಂಬಿ ದರ ಪ್ರತಿ ಮೆ.ಟನ್‌ಗೆ ರೂ.11,400/- (ಜಿ.ಎಸ್.ಟಿ ಹೊರತುಪಡಿಸಿ) ಆಗಿರುತ್ತದೆ ಎಂದು ತಿಳಿಸಲಾಗಿದೆ.<br>4. ಬಿರುಕು ಬಿಟ್ಟ ಮೊಲಾಸಿಸ್ ಟ್ಯಾಂಕ್ ಸುಮಾರು 30 ವರ್ಷದ ಹಿಂದೆ ಅನುಷ್ಠಾನವಾಗಿದ್ದು, ಪ್ರಸ್ತುತ ಹಂಗಾಮು 2024-25ನೇ ಸಾಲಿನ ಬಗರ್ ಹಂಗಾಮಿನಲ್ಲಿ ಟ್ಯಾಂಕಿನ ನಿರ್ವಹಣೆ ವಿಕ್ರಮಗಳನ್ನು ಅಳವಡಿಸುವಲ್ಲಿ ನಿರ್ಲಕ್ಷಿಸಿರುವುದು ಕಂಡು ಬಂದಿರುತ್ತದೆ ಎಂದು, ಸದರಿ ಕ್ರಮವನ್ನು ಮೈಷುಗರ್ ಸಕ್ಕರೆ ಕಾರ್ಖಾನೆ, ಮಂಡ್ಯ ಇವರು ಯಂತ್ರೋಪಕರಣಗಳ ನಿರ್ವಹಣೆಕಾರ್ಯವನ್ನು ಮೆ.ಆರ್.ಬಿ ಟೆಕ್ ಜೈಸಿಂಗ್ ಪುರ ಇವರಿಗೆ ಗುತ್ತಿಗೆ ಆಧಾರದ ಮೇಲೆ ಆದೇಶವನ್ನು ನೀಡಿರುತ್ತಾರೆ ಎಂದು, ಮೊಲಾಸಿಸ್ ಟ್ಯಾಂಕ್‌ಗಳ ನಿರ್ವಹಣೆ ಒಳಗೊಂಡಿದ್ದು, ಸದರಿಯವರು ಸಕಾಲಕ್ಕೆ ಕ್ರಮ ಜರುಗಿಸಲು ಮೈಷುಗರ್ ಮಹಾಪ್ರಬಂಧಕರು ಪತ್ರದ ಮೂಲಕ ಸೂಚನೆಯನ್ನು ನೀಡಿದ್ದರೂ ಸಹ ಮೆ.ಆರ್.ಬಿ ಟೆಕ್ ಗುತ್ತಿಗೆದಾರರು ಬಗರ ಹಂಗಾಮಿನಲ್ಲಿ ನಿರ್ವಹಣೆ ಕಾರ್ಯವನ್ನು ನಿರ್ಲಕ್ಷಿಸಿರುವುದರಿಂದ ಮತ್ತು ಹಂಗಾಮು ಪೂರ್ವದಲ್ಲಿ ಸದರಿ ಟ್ಯಾಂಕಿನ ಪ್ಲೇಟ್‌ಗಳ ಬಿಡಿಭಾಗಗಳ ಥಿಕ್‌ನೆಸ್ ವಿಶ್ಲೇಷಣೆ ಮಾಡದೇ ಇರುವುದರಿಂದ ಈ ಅವಘಡ ಸಂಭವಿಸಲು ಕಾರಣವಾಗಿರುತ್ತದೆ ಎಂದು ತಿಳಿಸಿರುತ್ತಾರೆ.<br>5. ಈ ನಿಟ್ಟಿನಲ್ಲಿ ಮೊಲಾಸಿಸ್ ಟ್ಯಾಂಕ್ ಬಿರುಕು ಹಾಗೂ ಸೋರುವಿಕೆಯಾದ ಟ್ಯಾಂಕ್ ನಂ.9ರ ದಿನಾಂಕ:20.09.2025 ರಂದು ಮುಂಜಾನೆ 10.15 ಗಂಟೆಗೆ ರಾಜ್ಯ ಅಬಕಾರಿ ಇಲಾಖೆಯವರು ಕಾರ್ಯ ಸ್ಥಳಕ್ಕೆ ಬಂದು ಭೌತಿಕ ಪರಿಶೀಲನೆ ಮಾಡಿ ಮಹಜರ್ ಕ್ರಮವನ್ನು ಅಳವಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆಂದು ಎಂದು ತಿಳಿಸಿರುತ್ತಾರೆ.<br>ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ ಇವರು ಸಂಸ್ಥೆಯ ತಾಂತ್ರಿಕ ಸಲಹೆಗಾರರೊಂದಿಗೆ ದಿನಾಂಕ: 13.10.2025 ರಂದು ಮಂಡ್ಯದ ದಿ ಮೈಸೂರು ಷುಗರ್ ಕಂಪನಿಗೆ ಭೇಟಿ ನೀಡಿ ಸ್ಥಳ ಪರಿಶೀಲನಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಪರಿಶೀಲನಾ ವರದಿಯಲ್ಲಿ, ಅಂದಾಜು 20 ಟನ್ ಮೊಲಾಸಿಸ್ ಕಾಕಂಬಿ ಸೋರಿಕೆಯಾಗಿದ್ದು,ಆರ್ಥಿಕವಾಗಿ ಅಂದಾಜು ರೂ.2,28,000/-ಗಳ ನಷ್ಟದ ಉಂಟಾಗಿದೆ ಎಂದು ಅಭಿಪ್ರಾಯಿಸಲಾಗಿದೆ. |
| (ಈ) | ಆರ್ಥಿಕ ನಷ್ಟವನ್ನು ವಸೂಲಿ ಮಾಡುವುದು ಸೇರಿದಂತೆ ತಪ್ಪಿತಸ್ಥ ನೌಕರರ ವಿರುದ್ಧ ತೆಗೆದು ಕೊಂಡ /ತೆಗೆದುಕೊಳ್ಳಲು ಉದ್ದೇಶಿಸಿರುವ ಶಿಸ್ತು ಕ್ರಮಗಳೇನು: | ದಿನಾಂಕ:20.09.2025 ರಂದು ದಿ ಮೈಸೂರು ಷುಗರ್ ಕಂಪನಿಯಲ್ಲಿನ ಮೊಲಾಸಿಸ್ ಟ್ಯಾಂಕ್ ಸೋರಿಕೆಯಿಂದ ಕಂಪನಿಗೆ ಉಂಟಾಗಿರುವ ನಷ್ಟವನ್ನು ಸಂಬಂಧಪಟ್ಟ ಅಧಿಕಾರಿ/ ಸಿಬ್ಬಂದಿಗಳಿಂದ ವಸೂಲು ಮಾಡಲು ಹಾಗೂ ಮೊಲಾಸಿಸ್ ಟ್ಯಾಂಕ್ ಸೋರಿಕೆಯಾಗಲು ಕಾರಣಕರ್ತರಾದ ಅಧಿಕಾರಿ / ಸಿಬ್ಬಂದಿಗಳ ನಿರ್ಲಕ್ಷತೆಗಾಗಿ ನಿಯಮಾನುಸಾರ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರಿಗೆ ನಿರ್ದೇಶನ ನೀಡಲಾಗಿದೆ. |

| | | |
|---|---|---|
| (ಉ) | ಮೈಷುಗರ್ ಕಾರ್ಖಾನೆಯಲ್ಲಿ ಹೊಸ ಬಾಯ್ಲರ್ ಪ್ಲಾಂಟ್ ಅಳವಡಿಸುವ ಕುರಿತು ಸರ್ಕಾರದ ಹಂತದಲ್ಲಿರುವ ಪ್ರಸ್ತಾವನೆಗೆ ಅನುಮೋದನೆ ನೀಡುವ ಕುರಿತು ಸರ್ಕಾರದ ನಿಲುವೇನು? (ಸಂಪೂರ್ಣ ಮಾಹಿತಿ ನೀಡುವುದು) | ದಿ ಮೈಸೂರು ಷುಗರ್ ಕಂಪನಿಯಲ್ಲಿನ ಬಾಯ್ಲಿಂಗ್ ಹೌಸ್ ದುರಸ್ತಿಗಾಗಿ ರೂ.60.00 ಕೋಟಿಗಳ ಮೊತ್ತವನ್ನು ಬಿಡುಗಡೆ ಮಾಡಲು ಕೋರಿ ದಿ ಮೈಸೂರು ಷುಗರ್ ಕಂಪನಿಯಿಂದ ದಿನಾಂಕ:14.10.2025ರಂದು ಪ್ರಸ್ತಾವನೆ ಸ್ವೀಕೃತವಾಗಿದ್ದು ಸದರಿ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ. |

ಸಂಖ್ಯೆ:ಸಿಐ 364 ಎಸ್‌ಜಿಎಫ್ 2025

**(ಶಿವಾನಂದ ಎಸ್ ಪಾಟೀಲ್)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು